ಇಂದು ದಿನಾಂಕಃ 13.12.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಪಿ ಹೆಚ್ ಪಿ ವಕೀಲರಿಂದಃ

1. ನನಗೆ 4 ಜನ ಮಕ್ಕಳುಗಳು ಇರುತ್ತಾರೆ. ಅಲ್ಪವಯಿ ವಾದಿಯು ನನ್ನ ಇತರ ಮಕ್ಕಳುಗಳಿಗಿಂತ ಕಿರಿಯವನಾಗಿದ್ದಾನೆ. ಆತ ಮಾಸೂರಿನ ಶಾಲೆಗೆ ಹೋಗುತ್ತಿದ್ದಾನೆ. ನನಗೆ ವಾದಿಯನ್ನು ಹೊರತು ಪಡಿಸಿ 3 ಜನ ಹೆಣ್ಣು ಮಕ್ಕಳು ಇದ್ದು, ಅವರಲ್ಲಿ ಒಬ್ಬರ ಮದುವೆಯಾಗಿರುತ್ತದೆ. ಅಲ್ಪವಯಿ ವಾದಿಯು ನನ್ನ ಸಂರಕ್ಷಣೆಯಲ್ಲಿ ಇದ್ದಾನೆ ಎಂದರೆ ಸರಿ. ಹೊನ್ನಪ್ಪನಿಗೆ ಯಾವುದೇ ಆಧಾಯದ ಮೂಲಗಳು ಇಲ್ಲ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ನನ್ನ ಮಾವ ಫಕ್ಕೀರಪ್ಪ ಇವರ ಮಗ ಮತ್ತು ಮಗಳು ಎಂದರೆ ಸರಿ. ನನ್ನ ಮಾವನ ಮತ್ತು ಇತರರ ಮೇಲೆ 1 ಮತುತ 2 ನೇ ಪ್ರತಿವಾದಿಯರು ಅಸಲು ದಾವಾ ನಂ.132/2012 ರಲ್ಲಿ ಹಿಸ್ಸೆ ಕೋರಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಆ ದಾವೆಯ ದಾವಾ ಸ್ವತ್ತುಗಳೆಲ್ಲವೂ ನನ್ನ ಮಾವ ಫಕ್ಕೀರಪ್ಪ ಅವರ ಸ್ವಯಾರ್ಜಿತ ಆಸ್ತಿಗಳು ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಸದರಿ ದಾವೆಯು ಚಾಲ್ತಿಯಲ್ಲಿ ಇರುವ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನನ್ನ ಅತ್ತೆ ಸಿದ್ದಲಿಂಗವ್ವ ಮುಂದುವರೆಸಿಕೊಂಡು ಬಂದಿರತ್ತಾರೆ. ಅಸಲು ದಾವಾ ನಂ. 132/2012 ರಲ್ಲಿ ನನ್ನ ಯಜಮಾನರಾದ ನಾಗಪ್ಪ ಅವರು 5 ನೇ ಪ್ರತಿವಾದಿಯ ಆಗಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಯಜಮಾನರು ಸದರಿ ದಾವೆಯ ದಾವಾ ಆಸ್ತಿಗಳು ಫಕ್ಕೀರಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದು ತಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಯರಿಗೆ ತಲಾ 1/7 ರ ಹಿಸ್ಸೆಯ ಹಕ್ಕು ಇದೆ ಎಂದು ತೀರ್ಮಾನವಾಗಿದೆ ಎಂದರೆ ಸಾಕ್ಷಿಯು ಆದಾವೆಯು ಇನ್ನು ತೀರ್ಮಾನವಾಗಿಲ್ಲ ಎಂದು ನುಡಿಯುತ್ತಾರೆ.

3. ಈ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯನ್ನು ಸಲ್ಲಿಸುವಾಗಿ ದಾಖಲೆಗಳನ್ನು ನಾನೇ ನನ್ನ ವಕೀಲರಿಗೆ ನೀಡಿರುತ್ತೇನೆ. ಈ ದಾವೆಯಲ್ಲಿ ನಾನು 1 ಮತ್ತು 2 ನೇ ಪ್ರತಿವಾದಿಯರಿಗೆ ಹಾಗೂ ನನ್ನ ಮಾವನಾದ

ಫಕ್ಕೀರಪ್ಪ ಇವರಿಗೆ ತಲಾ 1/7 ರ ಹಿಸ್ಸೆಯ ಹಕ್ಕು ಇದೆ ಎಂದು ಅಸಲು ದಾವಾ ನಂ. 132/2012 ರಲ್ಲಿ ತೀರ್ಮಾನವಾಗಿದೆ ಎಂದು ಈ ದಾವೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ಸದರಿ ದಾವೆಯು ವಿಚಾರಣಾ ಹಂತದಲ್ಲಿ ಇದ್ದಾಗ ನನ್ನ ಯಜಮಾನರು ಕೂಡಾ ಹಾಜರಾಗಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ತೀರ್ಮಾನವಾದ ವಿದ್ಯಾಮಾನಗಳ ಬಗ್ಗೆ ನನ್ನ ಯಜಮಾನರಿಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ.

4. ಅಸಲು ದಾವಾ ನಂ. 132/2012 ರಲ್ಲಿ ಆದ ತೀರ್ಮಾನದಂತೆ 1 ಮತ್ತು 2 ನೇ ಪ್ರತಿವಾದಿಯರು ತಮ್ಮ 1/7 ಹಿಸ್ಸೆಯ ಹಕ್ಕುನ್ನು ಪ್ರತ್ಯೆಕಿಸಿಕೊಳ್ಳಲು ಎಫ್ ಡಿ ಪಿ ನಂ.18/15 ರಂತೆ ಪ್ರಕರವನ್ನು ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಫ್ ಡಿ ಪಿ ಪ್ರಕರಣದಲ್ಲಿ ನನ್ನ ಯಜಮಾನರು ಕೂಡಾ ಅವರ ವಕೀಲರು ಮುಖಾಂತರ ಹಾಜರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಎಫ್ ಡಿ ಪಿ ಪ್ರಕಣವು ಇನ್ನು ವಿಚಾರಣೆ ಹಂತದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಪ್ರಕರಣದಲ್ಲಿ ಪಕ್ಷಕಾರನಾಗಿ ಸೇರಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ವಾದಿಯ ಅಜ್ಜ ತನಗೆ ಸೇರಿದ ಹಿಸ್ಸೆಯನ್ನು ಅಲ್ಲವಯಿ ವಾದಿಗೆ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದು ಅದರಂತೆ ಆತನ ಆಸ್ತಿಯನ್ನು ನನಗೆ ಪ್ರತ್ಯೇಕಿಸಿಕೊಡಿ ಎಂದು ಅರ್ಜಿ ಹಾಕಿದ್ದೇವು.

5. ನಾನು, ನನ್ನ ಮಾವ , ನನ್ನ ಮಕ್ಕಳು , ನನ್ನ ಯಜಮಾನರು ಒಟ್ಟಿಗೆ ವಾಸವಿದ್ದೇವೆ. ನನ್ನ ಅತ್ತೆ ಸಿದ್ದಲಿಂಗವ್ವ 4 ನೇ ಪ್ರತಿವಾದಿಯ ಜೊತೆ ವಾಸವಿದ್ದಾರೆ. ನನ್ನ ಮಾವ ಮತ್ತು ಅತ್ತೆ ಯಾವ ಕಾರಣಕ್ಕೆ ಬೇರೆ ಬೇರೆ ವಾಸವಿದ್ದಾರೆ ಎಂದರೆ ಸಾಕ್ಷಿಯು ನನ್ನ ಮಕ್ಕಳುಗಳನ್ನು ಕಂಡೆ ನನ್ನ ಮಾವನಿಗೆ ಪ್ರೀತಿ ವಾತ್ಸಲ್ಯವಿದ್ದು ಹಾಗಾಗಿ ನನ್ನ ಜೊತೆ ವಾಸವಿದ್ದಾರೆ ಎಂದು ನುಡಿಯುತ್ತಾರೆ ಹಾಗೂ ಸಾಕ್ಷಿ ಮುಂದುವರೆದು ನನ್ನ ಅತ್ತೆ-ಮಾವ ಚೆನ್ನಾಗಿ ಇದ್ದರು ಎಂದು ನುಡಿಯುತ್ತಾರೆ. ನನ್ನ ಮಾವ ನಮ್ಮನೊಂದಿಗೆ ಸುಮಾರು 6 ವರ್ಷಗಳಿಂದ ವಾಸವಿದ್ದಾರೆ. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳಿಗೆ ನನ್ನ ಮಾವ ಬದುಕಿರುವವರೆಗೂ ಆಕೆಯ ಹೆಂಡತಿಯೊಂದಿಗೆ ಅಂದರೆ ನನ್ನ ಅತ್ತೆ ಜೊತೆಯಲ್ಲಿ ಬರುತಿದ್ದರು.

6. ಅಸಲು ದಾವಾ ನಂ. 132/2012 ತೀರ್ಮಾನವಾದ ನಂತರ ಅದನ್ನು ಪ್ರಶ್ನಿಸಿ ನನ್ನ ಮಾವ ಫಕ್ಕೀರಪ್ಪ ಮತ್ತು ಪ್ರತಿವಾದಿ 3 ರಿಂದ 5 ರವರ ಸದರಿ ದಾವೆಯ ಆಸ್ತಿಗಳು ಫಕ್ಕೀರಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳಿ ಆರ್ ಎ ನಂ. 59/2015 ರಂತೆ ಅಪೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ಕೂಡಾ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 2 ತೀರ್ಮಾನಗಳ ಮೇಲೆ ನನ್ನ ಮಾವನಾರು ಜೀವಂತ ಇದ್ದಾಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತೊಂದು ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

7. ನನ್ನ ಮಾವ ನನ್ನ ಅಲ್ಪವಯಿ ವಾದಿಗೆ ಬರೆದುಕೊಟ್ಟಿರುವ ಮೃತ್ಯು ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಮಾವ ಅಲ್ಪವಯಿ ವಾದಿಯ ಮೇಲೆ ಹೆಚ್ಚಿನ ಪ್ರೀತಿ ಮತ್ತು ವಾತ್ಸಲ್ಯ ಇದ್ದುದ್ದರಿಂದ ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಸದರಿ ಕಾರಣನ್ನು ಬಿಟ್ಟು ಮತ್ಯಾವುದೇ ಕಾರಣ ಇರುವುದಿಲ್ಲ. ನನ್ನ ಮಾವ ಮೃತ್ಯು ಪತ್ರವನ್ನು ಬರೆದುಕೊಟ್ಟ ಬಗ್ಗೆ ದಿಃ 27-01-2018 ರಲ್ಲಿ ಗೊತ್ತಾಗಿರುತ್ತದೆ. ನನ್ನ ಮಾವ ನಿಪಿ-1 ರಂತೆ ಮೃತ್ಯು ಪತ್ರವನ್ನು ಬರೆಯುವ ಪೂರ್ವದಲ್ಲಿ ಮೃತ್ಯು ಪತ್ರವನ್ನು ಬರೆಯುವ ವಿಷಯವಾಗಿ ನಮಗೆ ತಿಳಿಸಿದ್ದರು. ಮೃತ್ಯು ಪತ್ರ ಬರೆಯುವ 8 ದಿನಗಳ ಹಿಂದೆ ನನ್ನ ಮಾವ ಮೃತ್ಯು ಪತ್ರ ಬರೆಯುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ನನ್ನ ಮಾವ ಆತನ ಆಸ್ತಿಗಳಿಗೆ ಸಂಪೂರ್ಣ ಮಾಲೀಕನಿದ್ದು ಆದರೆ ಕೇವಲ 1/7 ರ ಹಿಸ್ಸೆಗೆ ಸಂಬಂಧಪಟ್ಟ ಹಾಗೇ ಯಾವ ಕಾರಣಕ್ಕೆ ಮೃತ್ಯು ಮಾಡುತ್ತಿದ್ದೀರಿ ಎಂದು ವಿಚಾರಣೆ ಮಾಡಿದ್ದೀರಾ ಎಂಬ ವಕೀಲರು ಸೂಚನೆಗೆ ಸಾಕ್ಷಿಯು ನಾವು ಯಾವ ಕಾರಣಕ್ಕೆ ಆ ರೀತಿ ಮಾಡುತ್ತಿದ್ದೀರಿ ಎಂದು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

8. ನಾನು, ನನ್ನ ಯಜಮಾನರು ಸೇರಿಕೊಂಡು ನಿಪಿ-1 ರ ಮೃತ್ಯು ಪತ್ರವನ್ನು ದಿಃ 27/01/2018 ನೇ ಇಸ್ವಿಯಂದು ನನ್ನ ಮಾವನೊಂದಿಗೆ ವಿಚಾರ ಮಾಡಿ ನಂತರ ಸದರಿ ದಿನಾಂಕದಂದು ಮೃತ್ಯು ಪತ್ರವನ್ನು ಬರೆಸಿರುತ್ತೇವೆ ಸಾಕ್ಷಿಯು ಮುಂದುರೆದು ನನ್ನ ಅತ್ತೆ ಅವರ ಕೂಡಾ ಭಾಗಿಯಾಗಿದ್ದರು ಎಂದು ನುಡಿಯುತ್ತಾರೆ. ಮೃತ್ಯು ಪತ್ರವನ್ನು ನಮ್ಮ ಮನೆಯಲ್ಲಿಯೇ ಬರೆದಿರುತ್ತಾರೆ. ನಿಪಿ-1 ನ್ನು ಬ ರೆಯುವ ಕಾಲಕ್ಕೆ ನಾನು, ನನ್ನ ಯಜಮಾನರು, ನನ್ನ ಅತ್ತೆ ಮಾವ ಹಾಗು ಸಾಕ್ಷಿದಾರರು ಇದ್ದರು. ನಿಪಿ-1 ಸಾಕ್ಷಿದಾರರನ್ನು ನನ್ನ ಯಜಮಾನರಾದ 4 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ಮೃತ್ಯು ಪತ್ರವನ್ನು ಜೋಕನಾಳ ಎಂಬ ವಕೀಲರು ನಮ್ಮ ಹಾಜರಾತಿಯಲ್ಲಿ ಬರೆದಿರುತ್ತಾರೆ ಸದರಿ

ಪತ್ರವನ್ನು ಬರೆದಾಗ ಬೆಳಗ್ಗೆ10 ಗಂಟೆಯಾಗಿತ್ತು. ನಿಪಿ-1 ರ ದಾಖಲೆಯನ್ನು ಬರೆಯಲು ನಾನು, ನನ್ನ ಯಜಮಾನರು, ಅತ್ತೆ ಮತ್ತು ಮಾವನವರು ಮಾಹಿತಿ ಕೊಟ್ಟಿರುತ್ತಾರೆ.

9. ನಿಪಿ-1 ರ ಮೃತ್ಯು ಪತ್ರಕ್ಕೆ ಮೊದಲಿಗೆ ನನ್ನ ಮಾವ ಸಹಿ ಮಾಡಿರುತ್ತಾರೆ. ನಂತರದಲ್ಲಿ ನನ್ನ ಅತ್ತೆ ಸಿದ್ದಲಿಂಗಮ್ಮ ಸಹಿ ಮಾಡಿರುತ್ತಾರೆ. ನಂರತದಲ್ಲಿ ಸಾಕ್ಷಿದಾರರಾದ ಅರ್ಜುನಪ್ಪ , ನಾಗಪ್ಪ ಬ್ಯಾಡಗಿ ಹಾಗೂ ನಾಗರಾಜ ಬಣಕಾರ ಇವರುಗಳು ಸಹಿ ಮಾಡಿರುತ್ತಾರೆ. ನಮ್ಮ ಮನೆಯಲ್ಲಿ ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-1 ರ ದಾಖಲೆಯು ಗಣಕಯಂತ್ರದಿಂದ ತಯಾರು ಮಾಡಲಾಗಿದೆ ಎಂದರೆ ಸರಿ. ಅದನ್ನು ವಕೀಲರು ಮಾಡಿಸಿಕೊಂಡು ಬಂದಿರುತ್ತಾರೆ. ಅದನ್ನು ಇಲ್ಲಿ ಟೈಪ್ ಮಾಡಿಸಿಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ದಿಃ 08-02-2018 ರಂದು ಮರಣ ಹೊಂದಿರುತ್ತಾರೆ. ಅವರ ಮರಣ ಹೊಂದುವ ಕಾಲಕ್ಕೆ ಆರೋಗ್ಯವಾಗಿ ಇದ್ದರು. ನಮ್ಮ ಮಾವನವರು ಯಡವಿ ಬಿದ್ದು ಗಾಯ ಮಾಡಿಕೊಂಡು ತೀರಿಕೊಂಡಿರುತ್ತಾರೆ.

10. ನನ್ನ ಮಾವನವರು ಮರಣ ಹೊಂದುವ 2 ವರ್ಷಗಳಿಂದ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರ ಆರೋಗ್ಯ ಚೆನ್ನಾಗಿ ಇತ್ತು ಎಂದು ನುಡಿಯುತ್ತಾರೆ. ನನ್ನ ಮಾವ ತೀರಿ ಹೋದರ ಆತನ ಹಿಸ್ಸೆಯ ಭಾಗವು ಇಲ್ಲರಿಗೂ ಭಾಗವಾಗುತ್ತದೆ ಎಂದು ತಿಳಿದು ಮೋಸ ಮಾಡುವ ಉದ್ದೇಶದಿಂದ ನಿಪಿ-1 ರ ಮೃತ್ಯು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಾನನಿಗೆ 1/7 ರ ಹಿಸ್ಸೆಯ ಹಕ್ಕನ್ನು ಮೃತ್ಯು ಪತ್ರದ ಮುಖಾಂತರ ನೀಡಲು ಯಾವುದೇ ಸಮಯದಲ್ಲಿ ಇಚ್ಚೆ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಯಾವುದೇ ಮೃತ್ಯು ಬರೆಯಲು ಇಚ್ಚೆ ಇಲ್ಲದಿದ್ದರು ಸಹ ನಾನು ಮತ್ತು ನನ್ನ ಯಜಮಾನರು ಸೇರಿಕೊಂಡು ಮೃತ್ಯು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

11. ದಾವಾ ಆಸ್ತಿಯನ್ನು ನಾವೇ ವಹಿವಾಟು ಮಾಡುತ್ತಿದ್ದೇವೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು 7 ಸರ್ವೆ ನಂಬರ್ ಗಳಲ್ಲಿ 10 ಎಕರೆ ವಿಸ್ತೀರ್ಣ ಇರುತ್ತದೆ. ದಾವಾ ಆಸ್ತಿಗಳ ಸರ್ವೆ ನಂ. 4, 95,119,107,118,160 ಮತ್ತು 161 ಆಗಿರುತ್ತವೆ. ದಾವಾ ಆಸ್ತಿಗಳ ಸರ್ವೆ ನಂಬರ್ ನಾವು ವಹಿವಾಟು ಮಾಡುತ್ತಿರುವ 1/7 ರ

ಹಿಸ್ಸೆಯ ಭಾಗಗಳ ಚಕ್ಕು ಬಂದಿಯನ್ನು ಹೇಳಲು ಬರುವುದಿಲ್ಲ. ನನ್ನ ಮಾವ ಯಾವುದೆ ಮೃತ್ಯು ಪತ್ರವನ್ನು ಬರೆದುಕೊಟ್ಟಿಲ್ಲದಿದ್ದರು ಅದನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೃತ್ಯು ಪ್ರಕಾರ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮಗೆ ಮೃತ್ಯು ಪತ್ರದ ಪ್ರಕಾರ ಯಾವುದೇ ಹಕ್ಕು ಇಲ್ಲದಿದ್ದರು ಕೂಡಾ 1 , 2 ಮತ್ತು 6 ನೇ ಪ್ರತಿವಾದಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಡಿರುವ ದಾವಾ ಆಸ್ತಿಗಳು ಅನಿಚ್ಚಿತತೆಯ ದಾವಾ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಅನಿಚ್ಚಿತೆಯ ಆಸ್ತಿಗಳಾಗಿದ್ದರಿಂದ ನ್ಯಾಯಾಲಯವು ಮಾಲೀತ್ವಕ್ಕೆ ಸಂಬಂದಪಟ್ಟಂತೆ ಠರಾವನ್ನು ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ತೀರದ ಹೋದ ಕುಷಲೆ ಅವರಿಗೆ ಇದ್ದ 1/7 ಹಿಸ್ಸೆದ ಭಾಗವು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-xx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.